**KARNATAKA FOREST DEPARTMENT**

**Office of the Deputy Conservator of Forests,**
**Bangalore Urban Division, Aranya Bhavan Annex,**
**18th cross, Malleswarum Bengaluru- 560003 Ph: 080 23343464**
**Email:dcfurban82@yahoo.co.in**

No.A4.Store.RS.CR-58/2017-18 Date: 29 /11/2017

## BRIEF SALE NOTIFICATION

It is hereby notified for the general information of the public that Red Sanders logs and pieces & Rose wood logs stored at **Jarakabande Government Sandalwood Godown, Jalahalli West, Kammagondanahalli Post, Bengaluru-560015** as mentioned below will be sold by tender-cum-auction mode through Forest Department. The sale conducting authority is Deputy Conservator of Forests, Bengaluru (Urban) Division Bengaluru. The tender-cum auction is subject to terms and conditions uploaded on the website www.aranya.gov.in by tender-cum auction.

| | |
|---|---|
| Date of tender-cum-auction | 9th December 2017 |
| Mode | Tender-cum-auction sale |
| Time | 01.00 PM onwards |
| Quantity of Material | Approximately 34 MT Red sanders wood of C-grade & Beete Logs – Qty 6 cum. |
| Approximate value | Above Rs.1.00 crore |
| Inspection of logs by the bidders | **30-11-2017 to 07-12-2017** **10.30 AM to 5.00 PM** at Jarakabande Sandalwood Godown, Jalhalli West, Kammagondanahalli, Bengaluru-560015 |
| Pre Bid Meeting | 7th December 2017 at 4.00 PM |

**Conditions:**

**1**. Intended bidders are advised to inspect the material to their satisfaction

2. The Quantity notified adjacent to each class kept for sale is approximate

3. Every interested bidders shall pay an Earnest money deposit (EMD) of Rs.1,00,000/- for all lots/or any lot of Red sanders EMD for Rosewood is Rs.25,000/ -for all lots.

4. Any bidders who pay EMD for red Sanders want to participate in the bidding of Rose wood need not pay the EMD again.

5. The black listed bidders, defaulters, Minors, insolvent persons will not be permitted to participate in the sale.

6. Detailed Sale Conditions to be downloaded from www.aranya.gov.in

**Deputy Conservator of Forests**
**Bengaluru Urban Division, Bengaluru**

ದೂರವಾಣಿ – 080-23343464
ಫ್ಯಾಕ್ಸ್ – 080-23343464
Email ID – dcfurban82@yahoo.co.in

ಕರ್ನಾಟಕ ಅರಣ್ಯ ಇಲಾಖೆ

# ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ

ಬೆಂಗಳೂರು ನಗರ ವಿಭಾಗ, ಅರಣ್ಯ ಭವನ ಸಂಕೀರ್ಣ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003

# Office of the Deputy Conservator of Forests

Bangalore Urban Division, Aranya Bhavan Annexe. 18th cross, Malleshwaram, Bangalore-560003

**ಸಂಖ್ಯೆ:ಎ4.ಬಿ.ಮ.ವಿಲೇವಾರಿ/ಸಿಆರ್:37/2017–18** **ದಿ : 29.11.2017**

## ಟೆಂಡರ್– ಕಂ–ಬಹಿರಂಗ ಹರಾಜು ಪ್ರಕಟಣೆ

ವಿಷಯ ಬೆಂಗಳೂರು ನಗರ ವಿಭಾಗದ ಜಾರಕಬಂಡೆ ದಾಸ್ತಾನು ಮಳಿಗೆಯಲ್ಲಿರುವ ಬೀಟೆ ಮರದ ಲಾಗ್‌ಗಳ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡುವ ಕುರಿತು.

*.*.*

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಬೆಂಗಳೂರು ನಗರ ವಿಭಾಗ ವ್ಯಾಪ್ತಿಯಲ್ಲಿ ಬರುವ ಜಾರಕ ಬಂಡೆ ದಾಸ್ತಾನು ಮಳಿಗೆಯಲ್ಲಿ ವಿವಿಧ ಅರಣ್ಯ ಮೊಕದ್ದಮೆ ಪ್ರಕರಣಗಳಲ್ಲಿ ವಶಪಡಿಸಿಕೊಂಡಿರುವ ಬೀಟೆ ಮರದ ಲಾಗ್‌ಗಳನ್ನು ದಾಸ್ತಾನಿರಿಸಿದ್ದು, ಇದ್ದ ಸ್ಥಿತಿಯಲ್ಲಿಯೆ ದಿನಾಂಕ:09.12.2017 ರಂದು ಮದ್ಯಾಹ್ನ 01.00 ಗಂಟೆಗೆ ಟೆಂಡರ್–ಕಂ–ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು. ಆಸಕ್ತಿಯುಳ್ಳವರು ಹರಾಜಿನಲ್ಲಿ ಭಾಗವಹಿಸುವ ಪೂರ್ವದಲ್ಲಿ ಹರಾಜಿನ ಷರತ್ತುಗಳನ್ನು ಮನಗಂಡು ನಿಗದಿಪಡಿಸಲಾದ ಠೇವಣಿಯನ್ನು ಜಮಾ ಮಾಡಿ ಹರಾಜಿನಲ್ಲಿ ಭಾಗವಹಿಸತಕ್ಕದ್ದು.

### ಅನುಸೂಚಿ

## Tentative Logs of Beete

| SL.NO. | LOT NUMBERS | Qty ( in cum) | Auction Sale place | E.M.D Amount |
|---|---|---|---|---|
| 1 | Lot No. -1 | 2.439 | Jarakabunde Godown | Rs.25,000/- |
| 2 | Lot No. -2 | 2.807 | | |
| 3 | Lot No. -3 | 0.75 | | |
| | **Total** | **5.996 cum** | | |

**ಭದ್ರತಾ ಠೇವಣಿ ಸ್ವೀಕರಿಸುವ ಸಮಯ:** **ಬೆಳಿಗ್ಗೆ 10 ಗಂಟೆಯಿಂದ 11 ಗಂಟೆಯವರೆಗೆ**

ಟೆಂಡರ್–ಕಂ–ಬಹಿರಂಗ **ಹರಾಜು ನಡೆಯುವ ಸಮಯ : ಮಧ್ಯಾಹ್ನ 1.00 ರಿಂದ**

ಪ್ರತಿಯೊಬ್ಬ ಖರೀದಿದಾರರರು ಹರಾಜಿನಲ್ಲಿ ಭಾಗವಹಿಸುವ ಪೂರ್ವದಲ್ಲಿ ಕೆಳಕಾಣಿಸಿದ ಠೇವಣಿ ಮೊತ್ತವನ್ನು ಪಾವತಿಸಿದ ನಂತರ ಮಾತ್ರ ಹರಾಜಿನಲ್ಲಿ ಭಾಗವಹಿಸತಕ್ಕದ್ದು. ಹರಾಜಿನ ನಿಭಂದನೆಗಳನ್ನು ಮತ್ತು ಮಾಹಿತಿಗಳನ್ನು ಈ ಕಛೇರಿಯಲ್ಲಿ ರಜಾ ದಿನಗಳನ್ನು ಹೊರತುಪಡಿಸಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ. ಹರಾಜಿನಲ್ಲಿ ಭಾಗವಹಿಸುವ ಎಲ್ಲಾ ಖರೀದಿದಾರರು ಹರಾಜಿನ ಷರತ್ತುಗಳನ್ನು ಮನಗಂಡು ಹಾಗೂ ಮರಗಳನ್ನು ಖುದ್ದಾಗಿ ಪರಿಶೀಲಿಸಿಕೊಂಡು ಹರಾಜಿನಲ್ಲಿ ಭಾಗವಹಿಸುವುದು. ಹರಾಜಿನ ನಂತರ ಬರುವ ಯಾವುದೇ ರೀತಿಯ ಅಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

**ಸಹಿ/-**
**ಉಪ ಅರಣ್ಯ ಸಂರಕ್ಷಣಾಧಿಕಾರಿ,**
**ಬೆಂಗಳೂರು ನಗರ ವಿಭಾಗ, ಬೆಂಗಳೂರು**

## <u>ಷರತ್ತುಗಳು</u>

| | |
|---|---|
| **1** | ಹರಾಜು ಪ್ರಕ್ರಿಯ ಪ್ರಾರಂಭವಾಗುವ ಮೊದಲು ಪ್ರತಿ ಯೂನಿಟ್‌ಗೆ ಸಂಬಂಧಿಸಿದಂತೆ ಇ.ಎಂ.ಡಿ. ಮೊತ್ತ ರೂ.25,000/- ರಂತೆ ಡಿ.ಡಿ. / ನಗದು ಪಾವತಿಸಿ ರಶೀದಿ ಪಡೆದು ನಂತರ ಹರಾಜಿನಲ್ಲಿ ಭಾಗವಹಿಸತಕ್ಕದ್ದು. |
| **2** | ಯಶಸ್ವಿ ಸವಾಲುದಾರರು ಸವಾಲಿನ ದಿನದಂದು ಅವರು ಪಡೆದ ಸವಾಲಿನ ಮೊತ್ತದ ಕನಿಷ್ಠ ಶೇ. 25% ರಷ್ಟು ಹಣ ಹಾಗೂ ಸವಾಲಿನ ಸಂಪೂರ್ಣ ಹಣದ ಮೇಲಿನ ಅನ್ವಯವಾಗುವ ತೆರಿಗೆಗಳನ್ನು ಸಂಪೂರ್ಣವಾಗಿ ಪಾವತಿಸತಕ್ಕದ್ದು. ಹರಾಜು ಮೌಲ್ಯದ ಸಂಪೂರ್ಣ ಮೊತ್ತವನ್ನು ಪಾವತಿಸಿದ ನಂತರವೇ ಹರಾಜಿನ ಉತ್ಪನ್ನಗಳನ್ನು ಬಿಡುಗಡೆ ಮಾಡಲಾಗುವುದು. |
| **3** | ಈ ಹರಾಜನ್ನು ಆಡಳಿತಾತ್ಮಕವಾಗಿ ರದ್ದುಪಡಿಸುವ ಅಥವಾ ದಿನಾಂಕವನ್ನು ಮುಂದಕ್ಕೆ ಹಾಕುವ ಅಧಿಕಾರವು ಈ ಕೆಳ ಸಹಿದಾರರಿಗೆ ಇರುತ್ತದೆ. |
| **4** | ಖರೀದಿದಾರರು ಪಡೆದುಕೊಂಡ ಬೀಟೆ ಲಾಗ್‌ಗಳನ್ನು 15 ದಿನಗಳೊಳಗೆ ತೆರವುಗೊಳಿಸಬೇಕು. ಈ ಕುರಿತು ಅವಧಿ ವಿಸ್ತರಣೆ ಮಾಡುವುದಿಲ್ಲ. |
| **5** | ಖರೀದಿದಾರರು ವಿಳಾಸದ ಕುರಿತು ಈ ಕೆಳಗೆ ಕಾಣಿಸಿದ ದಾಖಲೆಗಳನ್ನು ನೀಡುವುದು. ರೇಷನ್ ಕಾರ್ಡ್ / ಆದಾರ್ ಚೀಟಿ / ಗುರುತಿನ ಚೀಟಿ (ವೋಟರ್ ಐ.ಡಿ) / ಇನ್ನಿತರೆ ವಿಳಾಸದ ಸೂಕ್ತ ದಾಖಲೆಗಳನ್ನು ಸಲ್ಲಿಸಬೇಕು. |
| **6** | ಹರಾಜು ಷರತ್ತುಗಳನ್ನು ಹೊಸದಾಗಿ ಸೇರಿಸುವ / ತೆಗೆದುಹಾಕುವ ಹಕ್ಕನ್ನು ಕೆಳ ಸಹಿದಾರರು ಹೊಂದಿರುತ್ತಾರೆ. |
| **7** | ಚಾಲ್ತಿಯಲ್ಲಿರುವ ವಿವಿಧ ಸರ್ಕಾರಿ ಆದೇಶಗಳು ಅಧಿನಿಯಮಗಳ ಹಾಗೂ ಸುತ್ತೋಲೆಗಳ ನಿಯಮಗಳನ್ನು ಹರಾಜು ಪ್ರಕ್ರಿಯೆಯಲ್ಲಿ ಅನುಸರಿಸಲಾಗುವುದು. |
| **8** | ಟೆಂಡರ್ -ಕಂ-ಬಹಿರಂಗ ಹರಾಜು ಕುರಿತು ಯಾವುದೇ ತಕರಾರುಗಳು ಉದ್ಭವಿಸಿದಲ್ಲಿ ಹರಾಜನ್ನು ಅಂಗೀಕರಿಸುವ / ತಿರಸ್ಕರಿಸುವ ಎಲ್ಲಾ ಅಧಿಕಾರವು ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ನಗರ ವಿಭಾಗ, ಬೆಂಗಳೂರು ಇವರಿಗೆ ಇದ್ದು, ಅವರ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ. |
| **9** | ಹರಾಜಿನಲ್ಲಿ ಭಾಗವಹಿಸುವ ಮೊದಲು ಬಿಡ್ಡುದಾರರು ಲಾಗ್‌ಗಳ ಪ್ರಮಾಣವನ್ನು ಹಾಗೂ ಗುಣಮಟ್ಟವನ್ನು ಖಚಿತಪಡಿಸಿಕೊಂಡು ನಂತರವೇ ಹರಾಜಿನಲ್ಲಿ ಭಾಗವಹಿಸಬೇಕು. ಈ ಬಗ್ಗೆ ಯಾವುದೇ ದೂರುಗಳಿಗೆ ಅವಕಾಶವಿರುವುದಿಲ್ಲ. |
| **10** | ಇನ್ನು ಹೆಚ್ಚಿನ ಷರತ್ತುಗಳನ್ನು ಹರಾಜಿನ ಸಂದರ್ಭ ಅಥವಾ ನಂತರ ಸೇರಿಸುವ ಅಧಿಕಾರವನ್ನು ಈ ಕೆಳ ಸಹಿದಾರರು ಹೊಂದಿರುತ್ತಾರೆ. |
| **11** | ಹೆಚ್ಚಿನ ವಿವರಗಳಿಗಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ನಗರ ವಿಭಾಗ, ಬೆಂಗಳೂರು ಇವರ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದು. |
| **12** | ಉತ್ಪನ್ನಗಳನ್ನು ಸಾಗಿಸುವಾಗ ಕಡ್ಡಾಯವಾಗಿ ಇಲಾಖೆಯಿಂದ ನಿಯಮಾನುಸಾರ ರಹದಾರಿ ಪಡೆದು ಸಾಗಿಸತಕ್ಕದ್ದು. |

**ಉಪ ಅರಣ್ಯ ಸಂರಕ್ಷಣಾಧಿಕಾರಿ,**
**ಬೆಂಗಳೂರು ನಗರ ವಿಭಾಗ, ಬೆಂಗಳೂರು**